ದಿನಾಂಕ-16.06.2020

ಪತ್ರ ಸಂಖ್ಯೆ: ಕರಾಮಹರಆ/ಸದಸ್ಯರು/19-2020 ಸಂ-29

ಇವರಿಗೆ,

ಗೌರವಾನ್ವಿತ ಅಧ್ಯಕ್ಷರು/ಕಾರ್ಯದರ್ಶಿಯವರು
ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ
ಬೆಂಗಳೂರು

ಮಾನ್ಯರೇ,

**ವಿಷಯ: ಸರ್ಕಾರಕ್ಕೆ ಶಿಫಾರಸ್ಸು ಕಳುಹಿಸಲು ತಮ್ಮ ಅವಗಾಹನೆಗಾಗಿ ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ ಬೆಂಗಳೂರು ಗೌರವಾನ್ವಿತ ಅಧ್ಯಕ್ಷರಾಗಿರುವ ಡಾ. ಆಂತೋಣಿ ಸಭಾಸ್ಟಿಯನ್ ಹಾಗೂ ಸದಸ್ಯರಾದ ಶ್ರೀ ಪರಶುರಾಮ. ಎಮ್.ಎಲ್ ಆದ ನಾನು, ಮೈಸೂರು ವಿಭಾಗದ ವಲಯ ಸಂಯೋಜಕರಾದ ದೀಕ್ಷಿತ್ ರವರ ಜೊತೆ ಕೋವಿಡ್-19ರ ಸಂಧರ್ಭದಲ್ಲಿ ಹಾಡಿಯ ಮಕ್ಕಳ ಸ್ಥಿತಿಗತಿಯ ಪರಿಶೀಲನೆಗಾಗಿ ಭೇಟಿ ನೀಡಿದ ಹಾಗೂ ಶಿಫಾರಸ್ಸನ್ನು ಒಳಗೊಂಡಿರುವ ವರದಿ.**

ಕೋವಿಡ್-19 ರಿಂದ ಉಂಟಾಗಿರುವ ಪರಿಣಾಮಗಳು ಜನಸಾಮಾನ್ಯರಲ್ಲಿ ವ್ಯಕ್ತಿಗತವಾಗಿ ಅವರ ಮನಸ್ಸಿನ ಮೇಲೆ ಉಂಟಾದ ಪರಿಣಾಮಗಳು, ಆರ್ಥಿಕ ಸ್ಥಿತಿ ಅಂತರಗಳು, ಭಾವನಾತ್ಮಕವಾದ ವಿಚಾರಗಳು, ಮತ್ತು ಅಂತರ್ಜಾಲದ ಶಿಕ್ಷಣದಿಂದ ಆಗುವ ಉಪಯೋಗ ಮತ್ತು ಅನುಉಪಯೋಗಗಳು ಇವುಗಳೆಲ್ಲವನ್ನು ಸಮಗ್ರ ಪರಿಶೀಲನೆಗಾಗಿ ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗವು ತಳಮಟ್ಟದ ತಿಳುವಳಿಕೆಗಾಗಿ ದಿನಾಂಕ: 13.06.2020 ಮತ್ತು 14.06.2020 ರಂದು ಪ್ರಯಾಣವನ್ನು ಅಧಿಕಾರಿ ಮಿತ್ರರು, ಜನಸಮುದಾಯಗಳು, ಸ್ವಯಂ ಸೇವಾ ಸಂಸ್ಥೆ ಗಳನ್ನು ಒಳಗೊಂಡಂತೆ ಕುದ್ದು ಪರಿಶೀಲನೆಗಾಗಿ ತೆರಳಲಾಯಿತು.

ಕೆಳಕಂಡ ಜಿಲ್ಲೆ, ಆ ಜಿಲ್ಲೆಯ ಗ್ರಾಮಗಳು, (ಕೊಡಗು ಜಿಲ್ಲೆಯ, ವಿರಾಜ್ ಪೇಟೆ ತಾಲೂಕಿನ, ಕಾರಕಂಡಿ, ನಾಗರಹೊಳೆ ಅಂಚೆಯ ಗದ್ದಾಡಿ, ದೇವಮಚ್ಚಿ, ತಿತಿಮತಿ, ಚಿಮಟಗೆರೆ ಹಾಗೂ ಮೈಸೂರು ಜಿಲ್ಲೆಯ ಆನೆಮಾಳ, ಮಚ್ಚೂರು, ಬಲ್ಯಾಡಿ, ಭಾವಲಿ ಹಾಡಿ)ಗಳಿಗೆ ಭೇಟಿ ಮಾಡಲಾಯಿತು. ಸಮಾನತೆಯ ಕಾನೂನು ಎಂಬ ಅಂಶವನ್ನು

ವಿರೋಧ ಬಾಸವಾಗಿ ಇಲ್ಲಿಯ ಸಮಸ್ಯೆಗಳನ್ನು ನೋಡುವಂತಹ ಸ್ಥಿತಿ ನಿರ್ಮಾಣ ವಾಗಿರುವುದು ಖಿಷಧನೀಯ ಆದಿವಾಸಿಗಳನ್ನು ಈ ಅಸಮಾನತೆಯ ದವಡೆಯಿಂದ ಸಂರಕ್ಷಿಸಬೇಕಾಗಿದೆ. ಭಾರತೀಯ ಸಂವಿಧಾನದ ರಾಜ್ಯ ನಿರ್ದೇಶನ ತತ್ವಗಳು ಹಾಗೂ ಸಂವಿಧಾನ ಪರಿಚ್ಛೇದ 46 ರಲ್ಲಿ ಸ್ಪಷ್ಟಪಡಿಸುವಂತೆ, ರಾಜ್ಯವು ವಿಶೇಷ ರಿಯಾಯಿತಿ, ಅನುಕಂಪ, ಅನುಭೂತಿ, ಶಿಕ್ಷಣ ಮತ್ತು ಆರ್ಥಿಕ ಅಭಿವೃದ್ಧಿಯನ್ನು ಕೈಗೊಂಡಿರುವುದರಿಂದ ದುರ್ಬಲರನ್ನು ಸಂರಕ್ಷಿಸಿಕೊಳ್ಳಬೇಕಾಗಿದೆ. ಆದಿವಾಸಿಗಳ ಹಾಗೂ ಅವರ ಮಕ್ಕಳು ಘನತೆಯುಕ್ತ ಬದುಕಿಗಾಗಿ 2006 ಮತ್ತು ನಿಯಮ 2008 ರ ಅರಣ್ಯ ಹಕ್ಕು ಕಾಯ್ದೆಯಲ್ಲಿ ತಿಳಿಸಿರುವ ಆಶಯವನ್ನು ಎತ್ತಿ ಹಿಡಿಯಬೇಕಾಗಿದೆ. ಈ ಮಕ್ಕಳ ವಿಷಯದಲ್ಲಿ ಹಾಗಾಗಿ ಮಾನವೀಯತೆ ಮತ್ತು ಮಾನವ ಹಕ್ಕುಗಳ ಬೆಳಕಿನಲ್ಲಿ ಈ ಸಮಸ್ಯೆಗಳನ್ನು ಪರಮಾರ್ಶನೆ ಮಾಡುವುದು ಅತ್ಯವಶ್ಯಕವಾಗಿದೆ. ಇಲ್ಲವೆಂದರೆ ಶಿಕ್ಷಣವು ತುಳಿತಕ್ಕೊಳ ಪಟ್ಟವರ, ಅದರಿಂದ ಪರಿತ್ಯಕ್ತ ವಾದವರ ಪಾಲಿಗೆ ಇಲ್ಲವೆಂದಾಗುತ್ತದೆ. ಆದಿವಾಸಿ ಹಾಡಿಗಳಿಂದ ಬಂದಿರುವಂತಹ ಅಭಿಪ್ರಾಯಗಳನ್ನು ಹಾಗೂ ಆಯಾಮಗಳನ್ನು ಸ್ಥರಗಳಲ್ಲಿ ಅನ್ವಯಿಸುತ್ತಾ ಮಕ್ಕಳೊಡನೆ ಸಂವಾದ, ಅವರ ತಾಕಲಾಟಗಳು, ಮನೋಮಂಥನ, ಉತ್ಸಾಹಗಳನ್ನು ಗುರುತಿಸಿ ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗವು ಕೋವಿಡ್-19ರ ಬಗ್ಗೆ ತಿಳುವಳಿಕೆಗಳನ್ನು ಹೇಳುತ್ತಲೇ ಸೂಕ್ಷ್ಮವಾದ, ಸಮಗ್ರವಾದಂತಹ ವಿಚಾರವನ್ನು ಗ್ರಹಿಸಿ ಸರ್ಕಾರಕ್ಕೆ ಈ ವರದಿಯನ್ನು ಸಲ್ಲಿಸಲಾಗಿದೆ.

- ಆದಿವಾಸಿ ಹಾಡಿಗಳಲ್ಲಿ ವಾಸವಿರುವ ಮಕ್ಕಳು ಮತ್ತು ಅವರ ಪೋಷಕರೊಡಗೂಡಿ ಮಕ್ಕಳ ಜೊತೆಗೆ ಆಡು ಭಾಷೆಯಲ್ಲಿ ಸಂವಾದಿಸುತ್ತಾ ಮಾಹಿತಿಯನ್ನು ಸಂಗ್ರಹಿಸಲಾಯಿತು. ಆ ಮಾಹಿತಿಯ ಅಂಶಗಳೆಂದರೆ
- ಆದಿವಾಸಿ ಹಾಡಿಗಳಲ್ಲಿ ವಾಸವಿರುವ ಮಕ್ಕಳು ಮತ್ತು ಅವರ ಪೋಷಕರು ಮುಖ್ಯವಾಹಿನಿಯ ಶಾಲೆಗಳ ಬಗ್ಗೆ ತಿಳುವಳಿಕೆಗಳನ್ನು ಹೊಂದಿದ್ದು, ಕಲಿಕೆಗಾಗಿ ಶಾಲೆಯೇ ಮಾಧರಿ ಎಂದುಕೊಂಡಿದ್ದಾರೆ. ಯಾವುದೇ ರೀತಿಯಲ್ಲಿಯೂ ಅಂತರ್ಜಾಲದ ಬಗ್ಗೆ ಹಾಗೂ ಅಲ್ಲಿಯ ಶಿಕ್ಷಣದ ಬಗ್ಗೆ ತಿಳುವಳಿಕೆ ಇರುವುದಿಲ್ಲ. ಹಾಗಾಗಿ ಅಂತರ್ಜಾಲದ ಶಿಕ್ಷಣದ ಬಗ್ಗೆ ಹಾಗೂ ಮೂಲಭೂತ ಸೌಕರ್ಯವನ್ನು ಕಲ್ಪಿಸಿ ಅಂತರ್ಜಾಲ ಶಿಕ್ಷಣವನ್ನು ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಸೂಕ್ತ ಪ್ರಚಾರಗೊಳಿಸಿ ನಂತರ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವುದು ಅರ್ಥಪೂರ್ಣವಾಗಿರುತ್ತದೆ. ಪ್ರಾಥಮಿಕವಾದಂತಹ ಯಾವುದೇ ರೀತಿಯ ಆ ಸಿದ್ಧತೆಗಳಿಲ್ಲದೇ ಶಿಕ್ಷಣವನ್ನು ಅಂತರ್ಜಾಲದ ಮೂಲಕ ಹಿರಿಯ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಅಂತರ್ಜಾಲ ಶಿಕ್ಷಣವನ್ನು ಪ್ರಚಾರವಿಲ್ಲದೇ, ತರಬೇತಿಯಿಲ್ಲದೇ ನಡೆಸುವುದು ಸೂಕ್ತವಲ್ಲ.
- ವಿದ್ಯುತ್ತೇ ಇಲ್ಲದಿರುವ ಹಾಗೂ ಶಿಕ್ಷಣಕ್ಕಾಗಿ ಒಂದು ಹೊಸ ವಿಚಾರಕ್ಕೆ ಪೂರಕವಾಗಿ ಪುಸ್ತಕಗಳನ್ನು ಕೊಂಡುಕೊಳ್ಳುವ ಆರ್ಥಿಕ ಸಾಮರ್ಥ್ಯವೇ ಇಲ್ಲದ ಈ ಕುಟುಂಬಗಳು ಅಂತರ್ಜಾಲ ಶಿಕ್ಷಣಕ್ಕೆ ಬೇಕಾದ ಸ್ಮಾರ್ಟ್‌ಫೋನ್ ಗೆ ಒಗ್ಗಿಕೊಳ್ಳುವುದು ಕಷ್ಟವೇ ಆಗಿದೆ.
- ಮಕ್ಕಳು ವಾಸಮಾಡುತ್ತಿರುವ ಹಾಡಿಗಳಲ್ಲಿ ಮೂಲಭೂತ ಸೌಕರ್ಯದ ಸಮಸ್ಯೆಗಳು ಎದ್ದು ಕಾಣುತ್ತದೆ. ಅಂತರ್ಜಾಲ ಶಿಕ್ಷಣಕ್ಕೆ ಸಂಬಂದಿಸಿದಂತೆ ಮಕ್ಕಳೊಡನೆ ಸಂವಾದಿಸಿದಾಗ ಹಾಡಿಯ ಆದಿವಾಸಿ ಮಕ್ಕಳ ಅಭಿಪ್ರಾಯಗಳಲ್ಲಿ ಅಂತರ್ಜಾಲ ಶಿಕ್ಷಣವು ಬೇಡವೇ ಬೇಡ, ಇರುವವರು ಮನೆಯಲ್ಲಿ ಕುಳಿತು ಕಲಿಯುತ್ತಾರೆ, ದುಡ್ಡು ಇರುವವರು ಪಠ್ಯ ಕೇಳುತ್ತಾರೆ, ಆದಿವಾಸಿ ಪೋಷಕರಿಂದಾಗಿ ನಮ್ಮನ್ನು ಕೆಲಸ ಮಾಡಿ ಹಣ ತರಲು ಹೇಳುತ್ತಾರೆ ಎಂಬುದು ಅವರ ಅಭಿಪ್ರಾಯವೇ ಆಗಿದೆ. ಕೆಲವೊಮ್ಮೆ ಉಧ್ಯೋಗಹಾತರದ ತೋಟದ ಮಾಲಿಕರು ಹೇಳಿದಂತೆ ಪೋಷಕರು ಕೇಳುತ್ತಾರೆಂದು ಎಲ್ಲಾ ಆದಿವಾಸಿ ಮಕ್ಕಳ ಅಭಿಪ್ರಾಯವಾಗಿದೆ.

- ಸರ್ಕಾರದಿಂದ ಹಣ ಬಿಡುಗಡೆಯಾದ ಕೆಲವು ಅಂಗನವಾಡಿಗಳಲ್ಲಿ ನಿರ್ವಹಣೆಯು ಸಮರ್ಪಕವಾಗಿ ಕಂಡುಬಂದಿರುವುದಿಲ್ಲ. ಆದಿವಾಸಿಗಳಿಗೆ ಪೌಷ್ಠಿಕ ಆಹಾರದ ಕಿಟ್ಟುಗಳು ಕಳೆದ ೩ ತಿಂಗಳಿಂದ ದೊರಕದೇ ಇರುವುದು ಕಂಡುಬಂದಿರುತ್ತದೆ.
- ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯ್ದೆ–1993ರ ತಿದ್ದುಪಡಿ 2015ರ ಅನ್ವಯ, 3ಹೆಚ್.ಗ್ರಾಮಸಭೆಯ ವಿಶೇಷ ಸಭೆಯ ಕಲಂ(2) 1,2,3 ರಲ್ಲಿ ತಿಳಿಸಿರುವಂತೆ ಆದಿವಾಸಿ ಸಮದಾಯದ ಸ್ಥಳೀಯ ಗ್ರಾಮ ಪಂಚಾಯತ್‌ಗಳಲ್ಲಿ ನಡೆಯುವ ಗ್ರಾಮಸಭೆಗಳಲ್ಲಿ ಆದಿವಾಸಿ ಹಾಡಿಯ ಜನರು ಭಾಗವಹಿಸತಕ್ಕದ್ದು ಹಾಗೂ ಯೋಜನೆಗಳನ್ನು ಮತ್ತು ಕಾರ್ಯಕ್ರಮಗಳನ್ನು ರೂಪಿಸುವುದಕ್ಕಾಗಿ ಚರ್ಚೆ ನಡೆಸಲು ಅವಕಾಶ ನೀಡಬೇಕೆಂಬುದಿದೆ. ಆದರೆ ಸ್ಥಳೀಯ ಗ್ರಾಮಪಂಚಾಯತ್ ಮಟ್ಟದಲ್ಲಿ ನಡೆಯುವ ಗ್ರಾಮ ಸಭೆಯಲ್ಲಿ ಆದಿವಾಸಿ ಜನರು ಭಾಗವಹಿಸಲು ಹಾಗೂ ಅವರ ಸಮಸ್ಯೆಗಳನ್ನು ಸಂಬಂಧಪಟ್ಟ ಇಲಾಖಾದಿಕಾರಿವರಿಗೆ ವ್ಯಕ್ತಪಡಿಸಲು ಅವಕಾಶ ಸಿಗದ ಕಾರಣ ಮೂಲಭೂತ ಸೌಕರ್ಯಗಳು ಸಿಗುತ್ತಿಲ್ಲ. ಆದ್ದರಿಂದ ಗ್ರಾಮ ಪಂಚಾಯತ್ ಮಟ್ಟದಲ್ಲಿ ನಡೆಯುವ ಗ್ರಾಮಸಭೆಗೆ ಆದಿವಾಸಿ ಜನರು ಭಾಗವಹಿಸುವಂತೆ ಮಾಡಲು ಸಂಬಂಧಪಟ್ಟ ಇಲಾಖೆಗೆ ಶಿಫಾರಸ್ಸನ್ನು ಮಾಡಲಾಗುವುದು.(ಉದಾ: ಕೊಡಗು ಜಿಲ್ಲೆಯ ವಿರಾಜ್‌ಪೇಟೆ ತಾಲೂಕಿನ ನಾಗರಹೊಳೆ ನಾಲ್ಕೇರಿ ಪಂಚಾಯಿತ್ ಅಡಿಯಲ್ಲಿ ಬರುವಂತಹ ಹಾಡಿಯಲ್ಲಿ ಪೂರ್ಣಿಮ 13 ವರ್ಷ ಪ್ರಾಯದ ಬಾಲಕಿಯು ತನ್ನ ಎರಡು ಕಣ್ಣುಗಳನ್ನು ಕಳೆದುಕೊಂಡು ದೃಷ್ಠಿ ವೈಪಲ್ಯತೆಯಿಂದ ಬಳಲುತ್ತಿರುವುದು ಕಂಡುಬಂದಿದ್ದು,ಈ ಕುರಿತು ಬಾಲಕಿಯ ತಾಯಿಯಾದ ರೂಪ ಎಂಬಾಕೆಯ ಜೊತೆ ಮಾತನಾಡಿದಾಗ ಸರ್ಕಾರದ ಶಿಕ್ಷಣ, ಆರೋಗ್ಯ, ಚಿಕಿತ್ಸೆಗೆ ಸಂಬಂದಿಸಿದ ಯಾವುದೇ ವ್ಯವಸ್ಥೆಗಳು ದೊರಕದಿರುವುದು ಕಂಡುಬಂದಿದ್ದು ಕೂಡಲೇ ಕೊಡಗು ಜಿಲ್ಲೆಯ ಜಿಲ್ಲಾಧಿಕಾರಿಯವರ ಗಮನಕ್ಕೆ ತರುವುದುದಾಗಿಯೂ ಹಾಗೂ ಸೂಕ್ತ ವ್ಯವಸ್ಥೆಯನ್ನು ಕಲ್ಪಿಸುವುದಾಗಿ ಆದೇಶವನ್ನು ನೀಡಲಾಗಿದೆ)
- ಮಕ್ಕಳಿಗೆ ಏಕಕಾಲದಲ್ಲಿ ಗಣಕಯಂತ್ರಗಳನ್ನು ಹಾಗೂ ಅಂತರ್ಜಾಲವನ್ನು ಒದಗಿಸುವುದು ಸದ್ಯಕ್ಕೆ ಮರೀಚಿಕೆಯೆಂದೇ ಭಾವಿಸಬೇಕಾಗಿದೆ. ಒಂದೊಮ್ಮೆ ಈ ಸೌಲಭ್ಯಗಳನ್ನು ಒದಗಿಸಲಾದರೂ ಪೋಷಕರು ತಮ್ಮ ಉದ್ಯೋಗಗಳನ್ನು ಬದಿಗಿಟ್ಟು ಎಳೆಯ ಮಕ್ಕಳ ಹಾಗೂ ಪ್ರೌಢ ಮಕ್ಕಳ ಸಹಾಯಕ್ಕಾಗಿ ಮನೆಯಲ್ಲಿ ಉಳಿಯ ಬೇಕಾದ ಸಂದರ್ಭವಿದೆ. ರಾಜ್ಯದ ಆಡಳಿತಾತ್ಮಕ ಸಭೆಗಳು ಅಂತರ್ಜಾಲದ ಮೂಲಕ ನಡೆಯುತ್ತಿದ್ದಾಗಿಯೂ ಸಂಪರ್ಕ ಹಾಗೂ ಸಂವಹನ ಸಮರ್ಪಕವಾಗಿ ನಡೆಯದೇ ಅಧಿಕಾರಿಗಳೂ ಸಹ ಕಂಗಾಲಾಗುತ್ತಿರುವುದು ತಮಗೆ ತಿಳಿದಿದೆ. ಸ್ಥಿತಿ ಹೀಗಿರುವಾಗ ಶಾಲೆಗಳ ಒತ್ತಡ, ಪೋಷಕರ ಅಸಾಯಕತೆ, ಹಣಕಾಸಿನ ಮುಗ್ಗಟ್ಟು, ಕಾವಲು ಇಲ್ಲ ಎಂಬ ಸಂದರ್ಭದಲ್ಲಿ ಪ್ರೌಢ ಮಕ್ಕಳ ಆಲೋಚನಾ ಪರಿ ದಿಕ್ಕುತಪ್ಪುತ್ತದೆ. ತಂತ್ರಜ್ಞಾನದಲ್ಲಿನ ಧಕ್ಷತೆಯ ಕೊರತೆ, ಎಳೆಯ ಮಕ್ಕಳ ಮನಸ್ಸಿನ ಮೇಲೆ ಹೇಳಲಸಾಧ್ಯವಾದ ದುಷ್ಪರಿಣಾಮವನ್ನು ಬೀರಿ ತುಮುಲವನ್ನು ಸೃಷ್ಠಿಸುತ್ತಿವೆ. ಪ್ರತೀ ದಿನ ಗಂಟೆಗಟ್ಟಲೆ ತಮಗೆ ಸ್ಪಂದಿಸದ ಅಂತರ್ಜಾಲ ವ್ಯವಸ್ಥೆಯ ಮುಂದೆ ಕುಳಿತು ತಮ್ಮ ಪ್ರೀತಿಯ ಶಿಕ್ಷಕರಲ್ಲಿ ತಮ್ಮನ್ನು ಸಮರ್ಪಕವಾಗಿ ಅರ್ಪಿಸಿಕೊಳ್ಳಲಾಗದ ಮಕ್ಕಳ ಮನೋವ್ಯಾಕುಲತೆಯನ್ನು ನಾವು ಪರಿಗಣಿಸದೇ ಇರಲಾರದು. ಆಡುವ, ಕಲಿಯುವ ಎಚ್ಚರಿಕೆಯ ಆಲಿಸುವಿಕೆಯು ಹಾಗೂ ಭಾವನೆಗಳ ತೋರ್ಪಡಿಸುವಿಕೆಯು, ಮಕ್ಕಳೊಡನೆಯಿರುವ ದುಃಖ, ಅವಮಾನ, ಪರಸ್ಪರರಲ್ಲಿ ಹಂಚಿಕೆಯಾಗದಿದ್ದರೆ ಮಕ್ಕಳು ಅಸಹಾಯಕರಾಗುತ್ತಾರೆ. ಗುರು–ಶಿಷ್ಯರ ಮಾನವೀಯ ಅನುಬಂಧದ ಪೋಷಕತ್ವವು ಕೊರತೆಯಾಗುತ್ತದೆ. ಶಿಕ್ಷಣವು ಗುರು–ಶಿಷ್ಯರ ಸಂಬಂಧವಾಗಿದೆ. ಅಂತರ್ಜಾಲವು ಈ ಸಂಬಂಧವನ್ನು ಹದಗೆಡಿಸುವ ಆತಂಕ ನಮಿಗಿರಬೇಕಾಗಿದೆ. ಹಾಗೆಂದು ನಾವು ಆಧುನಿಕ ತಂತ್ರಜ್ಞಾನದ ಬಗ್ಗೆ ಅಗೌರವವನ್ನು ಹೊಂದಿರುವುದಿಲ್ಲ. ಆದರೆ ರಾಜ್ಯದ ಬುಡಕಟ್ಟು ಪ್ರದೇಶಗಳು, ಗ್ರಾಮೀಣ ಪರಿಸರ, ಕೊಳಚೆ ಪ್ರದೇಶಗಳ ವಿದ್ಯಾರ್ಥಿಗಳಿಗೆ ಈ ಸೌಲಭ್ಯಗಳನ್ನು ಒದಗಿಸುವುದು ಎಷ್ಟು ಸಾಧ್ಯ ಎಂಬ ಪ್ರಶ್ನೆ ನಮ್ಮ ಮುಂದಿದೆ. ತಮ್ಮದಲ್ಲದ ತಪ್ಪಿನಿಂದಾಗಿ ವ್ಯವಸ್ಥೆಯಲ್ಲಿನ ಕೊರತೆಯಿಂದಾಗಿ

ಮುಗ್ಧ ಮಕ್ಕಳು ತರಗತಿಯಲ್ಲಿ ಭಾಗವಹಿಸಲಾಗದೇ ಮನೋವ್ಯಾಕುಲತೆ, ಉದ್ವೇಗ, ಎಲ್ಲವನ್ನೂ ಕಳೆದುಕೊಳ್ಳುವ ಭೀತಿಗೆ ತಾತ್ಕಾಲಿಕವಾಗಿಯಾದರೂ ಒಳಗಾಗುವುದು ಸರಿಯಲ್ಲ. ಶಿಕ್ಷಣವು ಮುಖ್ಯವಾಗಿ ಮಕ್ಕಳ ಉತ್ತಮ ಆರೋಗ್ಯ ಮತ್ತು ಆತ್ಮಸ್ಥೈರ್ಯವನ್ನು ಹೆಚ್ಚಿಸುವಂತಿರಬೇಕು ಹೊರತಾಗಿ ಕುಗ್ಗಿಸಬಾರದು. ಶಿಷ್ಯ ಶಿಷ್ಯರಲ್ಲಿ, ಸಮ ವಯಸ್ಕರಲ್ಲಿ ಭಾವನೆಗಳ ಹಂಚಿಕೆಯು ಸಮಗ್ರತೆಯನ್ನು ಕಲಿಸುತ್ತದೆ.ಆರ್ಥಿಕವಾಗಿ ಹಿಂದುಳಿದ ಎಲ್ಲಾ ಜಾತಿಯ ಸಮುದಾಯಗಳು ಆನ್‌ಲೈನ್ ಶಿಕ್ಷಣದಿಂದ ಸ್ಮಾರ್ಟ್‌ಫೋನ್‌ನ್ನು ಕೊಂಡುಕೊಳ್ಳಲು ಸಾಧ್ಯವಾಗಿರುವುದಿಲ್ಲ. ಹಾಗೆಯೇ ಕಂಪ್ಯೂಟರನ್ನು ಕೂಡ ಗಮನಿಸಲು ಅಸಾಧ್ಯವಾಗುತ್ತದೆ. ಏಕೆಂದರೆ ಗ್ರಾಮದಲ್ಲಿ ವಿದ್ಯುತ್ ಪೂರಕೈಯು ಇರುವುದಿಲ್ಲ. ಇನ್ನು ಅಂತರ್ಜಾಲದ ಮಾತು ದೂರವೇ ಗಗನಕುಸುಮವೆ. ಇನ್ನು ವಿದ್ಯುತ್‌ಕರಣ ಕುಟುಂಬದಲ್ಲಿ ಇಲ್ಲದಿರುವುದು ಕೂಡ ಮಹತ್ವವಾದ ಪಾತ್ರವಹಿಸುತ್ತದೆ, ಇದರಿಂದಾಗಿ ಕೀಳರಿಮೆ ಬೆಳೆಯಲ್ಪಟ್ಟು ಅಸಹಾಯಕತೆ ಮನೆ ಮಾಡುತ್ತದೆ ಮಕ್ಕಳಲ್ಲಿ.

ಮಕ್ಕಳು ನಿರಂತರವಾಗಿ 4 ಗಂಟೆಗಳ ಸಮಯ ಗಣಕಯಂತ್ರ ಹಾಗೂ ಮೊಬೈಲ್ ಪೋನ್ ನೋಡುತ್ತಿದ್ದರೆ ಅಥವಾ ಬಳಸುತ್ತಿದ್ದರೆ ಅವರುಗಳ ಆರೋಗ್ಯದ ಮೇಲೆ ಅಡ್ಡ ಪರಿಣಾಮ ಬೀರುವ ಅಂಶಗಳನ್ನು ಈ ಕೆಳಗಿನಂತೆಯೇ ತಿಳಿಯಪಡಿಸಿದ್ದಾರೆ ತಜ್ಞರು.

- ತೀವ್ರ ರೀತಿಯ ಕಣ್ಣು ನೋವು, ತಲೆನೋವು, ದೃಷ್ಟಿ ಮಂಜಾಗುವುದು, ಕುತ್ತಿಗೆ ನೋವು ಹಾಗೂ ಬೆನ್ನುನೋವು ಉಂಟಾಗುವಿಕೆ.
- ನೆನಪಿನ ಶಕ್ತಿ ಕುಸಿಯುವಿಕೆ.
- ನಿದ್ರಾ ಹೀನತೆ, ಹಸಿವಿಲ್ಲದೇ ಇರುವುದು ಹಾಗೂ ತೂಕದಲ್ಲಿ ಇಳಿಕೆ.
- ಗಮನಹರಿಸುವಿಕೆಯ ಕೊರತೆ, ಉದ್ವೇಗತನ
- ಮೆದುಳಿನ ಬೆಳವಣಿಗೆಗೆ ತೊಡಕು.
- ಕಳಪೆ ನಡವಳಿಕೆ, ಸಿಟ್ಟಿಗೇಳುವುದು. ಇತ್ಯಾದಿ

ಈ ಮೇಲಿನ ಅಂಶಗಳನ್ನೆಲ್ಲವನ್ನು ಗಮನದಲ್ಲಿಸಿಕೊಂಡು ಮಕ್ಕಳ ಹಿತದೃಷ್ಟಿಯಿಂದ ಸರ್ಕಾರವು ಪ್ರಾಥಮಿಕ ಆನ್‌ಲೈನ್ ಶಿಕ್ಷಣವನ್ನು ರದ್ದುಮಾಡಿದೆ (09.06.2020). ಹಾಗೂ ಸ್ವಾಗತಾರ್ಹವಾದ ನಿರ್ಧಾರವೂ ಆಗಿದೆ. ಆದಾಗಿಯೂ ಪ್ರೌಢ ಶಾಲಾ ಮಟ್ಟದಲ್ಲಿಯೂ ಕೂಡ ಆನ್‌ಲೈನ್ ಶಿಕ್ಷಣವನ್ನು ರದ್ದುಗೊಳಿಸಬೇಕಾಗಿದೆ.






**ಆದಿವಾಸಿ ಹಾಡಿಯ ಮಕ್ಕಳೊಡನೆ ಸಂವಾದಿಸುತ್ತಿದ್ದೇವೆ**

**ಹಾಡಿಯ ಅಂಗನವಾಡಿಯ ಮಕ್ಕಳ ಜೊತೆ ಸಂವಾದಿಸುತ್ತಿದ್ದೇವೆ**




ಹಾಡಿಯಲ್ಲಿ ವಾಸವಿರುವ ಆದಿವಾಸಿ ಕುಟುಂಬಗಳಿಗೆ ಪೌಷ್ಠಿಕಾಂಶಯುಕ್ತ ಆಹಾರದ ಕಿಟ್‌ನ್ನು ವಿತರಿಸಿದೆವು



**ಹಾಡಿಯ ಮಕ್ಕಳೊಡನೆ ತೆಗೆದಿರುವ ಭಾವಚಿತ್ರ**

ಆದ್ದರಿಂದ ಆದಿವಾಸಿ ಮಕ್ಕಳ ಅಭಿವೃದ್ಧಿಗಾಗಿ ಈ ಮೇಲಿನ ಎಲ್ಲಾ ಅಂಶವನ್ನು ತೆಗೆದುಕೊಂಡು ಸರ್ಕಾರಕ್ಕೆ ಶಿಫಾರಸ್ಸನ್ನು ಕಳುಹಿಸಲು ಗೌರಾವಾನ್ವಿತ ಅಧ್ಯಕ್ಷರು ಈಗಾಗಲೇ ತಿಳಿಸಿರುವುದರಿಂದ ತತಕ್ಷಣ ಸರ್ಕಾರಕ್ಕೆ ವರದಿ ಸಲ್ಲಿಸಲು ಮಾನ್ಯ ಕಾರ್ಯದರ್ಶಿಗಳನ್ನು ಕೋರಲಾಗಿದೆ.

**ಸ್ಪಂದನೆಯ ನಿರೀಕ್ಷೆಯಲ್ಲಿ**

**ವಂದನೆಗಳೊಂದಿಗೆ**

**ತಮ್ಮ ವಿಶ್ವಾಸಿ**

**ಪರಶುರಾಮ್. ಎಮ್. ಎಲ್**

ಸದಸ್ಯರು

**ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ**

**ಬೆಂಗಳೂರು.**

ದಿನಾಂಕ-16.06.2020

ಪತ್ರ ಸಂಖ್ಯೆ:

ಇವರಿಗೆ,

ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ
ಬೆಂಗಳೂರು